**ದಿನಾಂಕಃ 08.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ವಾದಿ ಪರ ಶ್ರೀ. ಟಿ ಎ ಎಸ್ ವಕೀಲರಿಂದಃ-**

1. ದಾವಾ ಸ್ವತ್ತು ಮೂಲತಃ ಕಲ್ಲೇಬಸವಯ್ಯರವರಿಗೆ ಸೇರಿದ ಆಸ್ತಿ ಎಂದರೆ ಸರಿ. ಕಲ್ಲೇಬಸವಯ್ಯರವರಿಗೆ ಸೇರಿದ 7 ಗುಂಟೆ ವಿಸ್ತೀರ್ಣದ ಪೈಕಿ ದಾವಾ ಆಸ್ತಿಯನ್ನು ವಾದಿಗೆ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯನ್ನು ಕಲ್ಲೇಬಸವಯ್ಯ ತೀರಿಕೊಂಡ ನಂತರ ಅವರ ಮಗ ರಾಜು ಎಂಬುವವರು ದಾವಾ ಆಸ್ತಿಯನ್ನು ವಾದಿಗೆ ಕ್ರಯದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿದ ರಾಜುರವರಿಗೆ ಅವರ ಸಹೋದರರು ದಾವಾ ಆಸ್ತಿಯ ಸಂಬಂಧ ರಾಜುರವರ ಪಾಲಿಗೆ ಸೇರಬೇಕಾಗಿದ್ದು ಎಂದು ಒಪ್ಪಿಗೆ ಪತ್ರ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

2. ವಾದಿ ಲಕ್ಷ್ಮಣರವರು ಒಪ್ಪಿಗೆ ಪತ್ರ ದಾವಾ ಆಸ್ತಿಯ ಇ-ಖಾತಾ ಪತ್ರ ಮತ್ತು ಇನ್ನಿತರೆ ದಾಖಲೆಗಳನ್ನು ನೋಡಿ ರಾಜುರವರಿಂದ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಖರೀದಿ ಮಾಡುವ ಸಂದರ್ಭದಲ್ಲಿ ದಾವಾ ಆಸ್ತಿಯ ಚೆಕ್ಕುಬಂದಿ ತಪ್ಪಾಗಿತ್ತು ಎಂದು ಅದನ್ನು ತಿದ್ದುಪಡಿ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ರಾಂಪುರ ಗ್ರಾಮ ಪಂಚಾಯಿತಿಯ ಹಳೆ ಖಾತಾ ನಂ.93/93 ಹೊಸ ನಂ.114/93 ವಿಸ್ತೀರ್ಣ ಪೂರ್ವ-ಪಶ್ಚಿಮ 44 ಅಡಿ, ದಕ್ಷಿಣೋತ್ತರ 30 ಅಡಿ ಆಸ್ತಿಯನ್ನು ಯಾವ ಆಧಾರದ ಮೇಲೆ ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿಯು ನಾನು ನನಗೆ ಮಾರಾಟ ಮಾಡಿದ ಮಾರಾಟಗಾರರ ಹೆಸರಿಗೆ ಪಂಚಾಯಿತಿ ಖಾತೆ ಇದ್ದುದ್ದನ್ನು ನೋಡಿ ಖರಿದಿ ಮಾಡಿದ್ದೇನೆ ಎನ್ನುತ್ತಾರೆ. ಕಲ್ಲೇಬಸವಯ್ಯರವರು ಜಯಶೀಲರವರಿಗೆ ಯಾವುದೇ

ಜಿಪಿಎ ಮಾಡಿಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಜಿಪಿಎ ನೊಂದಾಯಿತ ಅಲ್ಲದ ದಾಖಲೆ ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ.

3. ನಾನು ಹಾಜರುಪಡಿಸಿರುವ ದಾಖಲೆಗಳು ಜಯಶೀಲರವರು ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ಅಸಲು ದಾವಾ ನಂ.158/2016 ಮತ್ತು 248/2016 ರಲ್ಲಿ ಇರುವ ಆಸ್ತಿಗಳಿಗೂ ಮತ್ತು ದಾವೆಗೂ ಮತ್ತು ಈ ಪ್ರಸ್ತುತ ದಾವೆಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ತಾವು ಕ್ರಯಪತ್ರ ಮಾಡಿಕೊಂಡಿರುವುದು 2007 ರಲ್ಲಿ ಎಂದರೆ ಸರಿ. ವಾದಿಯು ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರ ಮಾಡಿಕೊಂಡಿರುವುದು 2006 ರಲ್ಲಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಾವು ಕೆಲವು ದಾಖಲೆಗಳನ್ನು ತಿದ್ದುಪಡಿ ಮಾಡಿಕೊಂಡಿದ್ದು, ಸದರಿ ತಿದ್ದುಪಡಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡ ತಿದ್ದುಪಡಿಗಳು ಎಂದರೆ ಸರಿಯಲ್ಲ.

4. ತಾವು ಖರೀದಿ ಮಾಡಿದ ಆಸ್ತಿಯನ್ನು ಜಯಶೀಲರವರಿಂದ ಖರೀದಿ ಮಾಡದೆ ಕಡ್ಲೇಬಸವಯ್ಯ ರವರ ಮಗ ರಾಜು ಮತ್ತು ಪುಟ್ಟ ರವರಿಂದ ತಿದ್ದುಪಡಿ ಪತ್ರ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಒಪ್ಪಿಗೆ ಪತ್ರ ಮಾಡಿಸಿಕೊಂಡಿದ್ದೇನೆ ಎನ್ನುತ್ತಾರೆ. ಒಪ್ಪಿಗೆ ಪತ್ರ ತಾವು ಸೃಷ್ಟಿಸಿಕೊಂಡಿರುವುದು ಎಂದರೆ ಸರಿಯಲ್ಲ, ಸದರಿ ಒಪ್ಪಿಗೆ ಪತ್ರ ಕಾನೂನಿನಡಿ ಊರ್ಜಿತ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಪೋಟೋಗಳು ಕೇಸಿಗೊಸ್ಕರ ಸೃಷ್ಟಿಸಿ ಹಾಜರುಪಡಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯನ್ನು ಕ್ರಯ ಪತ್ರದ ಮೂಲಕ ಕಡ್ಲೇಬಸವಯ್ಯರವರ ಮಗ ರಾಜು ರವರಿಂದ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ರಸ್ತೆ ಇದೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ಯಾರಿಗೆ ಸೇರಿದ ಆಸ್ತಿ ಇದೆ ಎಂದರೆ ಕರಿಸಿದ್ದಯ್ಯನಿಗೆ ಸೇರಿದ ಆಸ್ತಿ ಇದೆ ಎಂದು ನುಡಿದು ಪ್ರಸ್ತುತ ರಾಕೇಶ್

ಎಂಬುವವರು ಮನೆ ಕಟ್ಟಿಕೊಂಡು ಇದ್ದಾರೆ ಎಂದು ನುಡಿಯುತ್ತಾರೆ. ವಾದಿಯ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನು ಮತ್ತು 1 ನೇ ಪ್ರತಿವಾದಿ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯು ವಕೀಲರ ಮೂಲಕ ನನಗೆ ನೋಟೀಸ್ ಕೊಡಿಸಿದ್ದರು ಎಂದರೆ ಸರಿ. ಸದರಿ ನೋಟೀಸಿಗೆ ನಾನು ಪ್ರತ್ಯುತ್ತರ ನೋಟೀಸ್ ನೀಡಿದ್ದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.  ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ